# ಭಾರತೀಯ ಜನತಾ ಪಾರ್ಟಿ

**ಶಿವಮೊಗ್ಗ ಜಿಲ್ಲೆ**

ಕಾರ್ಯಾಲಯ : 'ದೀನದಯಾಳು ಭವನ', ದೀನದಯಾಳು ರಸ್ತೆ, (ಜ್ಯೂಯಲ್ ರಾಕ್ ರಸ್ತೆ)
ದುರ್ಗಿಗುಡಿ, **ಶಿವಮೊಗ್ಗ-577201.**

ದೂರವಾಣಿ : 08182-279564, 275550 E-mail : bjpshimoga@gmail.com


ದಿನಾಂಕ.......................................

ಇವರಿಗೆ,

**ಶ್ರೀ ನಳೀನಕುಮಾರ್ ಕಟೀಲ್‌ರವರು**
ಮಾನ್ಯ ರಾಜ್ಯಾಧ್ಯಕ್ಷರು
ಭಾರತೀಯ ಜನತಾ ಪಾರ್ಟಿ
ಬೆಂಗಳೂರು.

ಮಾನ್ಯರೇ,

**ವಿಷಯ: ಶ್ರೀ ಆಯನೂರು ಮಂಜುನಾಥ್ ವಿರುದ್ಧ ಸೂಕ್ತ ಶಿಸ್ತು ಕ್ರಮದ ಬಗ್ಗೆ.**
**ಉಲ್ಲೇಖ : ಶ್ರೀ ಎನ್.ಕೆ. ಜಗದೀಶ್, ಶಿವಮೊಗ್ಗ ನಗರ ಬಿಜೆಪಿ ಅಧ್ಯಕ್ಷರು ಇವರ ಪತ್ರ ದಿನಾಂಕ : 11.04.2023 ರಂತೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಆಯನೂರು ಮಂಜುನಾಥ್, ಮಾನ್ಯ ವಿಧಾನ ಪರಷತ್ತಿನ ಸದಸ್ಯರು, ಶಿವಮೊಗ್ಗ ಇವರು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿ ಪಕ್ಷದ ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂದು ಪತ್ರ ಮುಖೇನ ಜಿಲ್ಲಾಧ್ಯಕ್ಷರಾದ ನನಗೆ ನೀಡಿರುತ್ತಾರೆ.

ಶ್ರೀ ಆಯನೂರು ಮಂಜುನಾಥ್ ಇವರು ವಿವಿಧ ಹೇಳಿಕೆಗಳನ್ನು ಸಾರ್ವಜನಿಕವಾಗಿ, ಪತ್ರಿಕಾಗೋಷ್ಠಿ ನಡೆಸಿ ನೀಡಿದ್ದು ಇದರಿಂದ ಜಿಲ್ಲಾ ಬಿಜೆಪಿಗೂ ಅಗೌರವ ಹಾಗೂ ಕಾರ್ಯಕರ್ತರ ಭಾವನೆಗೆ ಧಕ್ಕೆ ತಂದಿರುತ್ತಾರೆ. ಆದ್ದರಿಂದ, ಶ್ರೀ ಆಯನೂರು ಮಂಜುನಾಥ್ ಇವರ ವಿರುದ್ಧ ಸೂಕ್ತ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಅವಗಾಹನೆಗೆ ತರಲಾಗಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

**(ಟಿ.ಡಿ.ಮೇಘರಾಜ್)**
**ಜಿಲ್ಲಾಧ್ಯಕ್ಷರು**

**ಲಗತ್ತು : ಶ್ರೀ ಎನ್.ಕೆ. ಜಗದೀಶ್, ಶಿವಮೊಗ್ಗ ನಗರ ಬಿಜೆಪಿ ಅಧ್ಯಕ್ಷರು ಇವರ ಪತ್ರ**

**ಪ್ರತಿಯನ್ನು :** ಶ್ರೀ ಜಿ.ವಿ. ರಾಜೇಶ್‌ರವರು, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ, ಬಿಜೆಪಿ, ಕರ್ನಾಟಕ

# ಭಾರತೀಯ ಜನತಾ ಪಾರ್ಟಿ

**ಶಿವಮೊಗ್ಗ ನಗರ**

ಕಾರ್ಯಾಲಯ : 'ದೀನದಯಾಳು ಭವನ', ದೀನದಯಾಳು ರಸ್ತೆ, (ಜ್ಯೂಯಲ್ ರಾಕ್ ರಸ್ತೆ)
ದುರ್ಗಿಗುಡಿ, **ಶಿವಮೊಗ್ಗ-577201.** ದೂರವಾಣಿ : 08182-227400

ದಿನಾಂಕ 11/04/23

ಇವರಿಗೆ,

ಮಾನ್ಯ ಜಿಲ್ಲಾಧ್ಯಕ್ಷರು,

ಭಾರತೀಯ ಜನತಾ ಪಾರ್ಟಿ,

ಶಿವಮೊಗ್ಗ ಜಿಲ್ಲೆ.

ಮಾನ್ಯರೇ,

ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಶ್ರೀ ಆಯನೂರು ಮಂಜುನಾಥರವರು ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದಾರೆ. ನಗರದ ಪ್ರಮುಖ ವೃತ್ತಗಳಲ್ಲಿ ನಮ್ಮ ಪಕ್ಷದ ವಿರುದ್ಧ ಹಾಗೂ ನಾಯಕರುಗಳ ವಿರುದ್ಧ ಅವಹೇಳನಕಾರಿ ಫ್ಲೈಕ್ಸ್ ಗಳನ್ನು ಹಾಕಿ ಪಕ್ಷಕ್ಕೆ ಹಾನಿ ಮಾಡಿದ್ದಾರೆ. ಪಕ್ಷಕ್ಕೆ ಅದರದ್ದೆ ಆದ ಒಂದು ರೀತಿಯ ನಿಯಮವಿದೆ. ಇದನ್ನು ಮೀರಿ ಪತ್ರಿಕಾ ಗೋಷ್ಠಿ ಮಾಡಿ ತುಂಬಾ ಉದ್ಧಟತನದ ಮಾತುಗಳನ್ನು ಆಡುವುದರ ಮೂಲಕ ಪಕ್ಷಕ್ಕೆ ಕೆಟ್ಟ ಹೆಸರು ಬರುವಂತೆ ಹುನ್ನಾರ ಮಾಡಿದ್ದಾರೆ. ನಾನು ವಿಧಾನಪರಿಷತ್ತು ಸ್ಥಾನಕ್ಕೆ ರಾಜಿನಾಮೆ ಕೊಡುತ್ತೇನೆಂದು ಹೇಳಿ ಪಕ್ಷ ದ್ರೋಹಿಯಾಗಿದ್ದಾರೆ.

ನಗರದಲ್ಲಿ ನಡೆದ ಕೋಮುಗಲಭೆಗಳಿಗೆ ಹಾಗೂ ಸೆಕ್ಷನ್ ಹಾಕಲು ಬಿಜೆಪಿಯೇ ಕಾರಣ, ಬಿಜೆಪಿ ನಾಯಕರೇ ಕಾರಣವೆಂದು ಹೇಳುವ ಮೂಲಕ ಮುಸಲ್ಮಾನರಂತೆ ಮಾತನಾಡಿ ಸುನ್ನತ್ ಮಾಡಿಸಿಕೊಂಡವರಂತೆ ಮಾತನಾಡುತ್ತಿದ್ದಾರೆ. ಬಿಜೆಪಿ ಕಾರ್ಯಕರ್ತರುಗಳಿಗೆ ಅಪಮಾನ ಮಾಡುವ ರೀತಿಯ ಅವರ ನಡವಳಿಕೆ ಅಕ್ಷಮ್ಯ ಅಪರಾಧವಾಗಿದೆ. ಕೋರ್ ಕಮಿಟಿಯ ಒಟ್ಟು ನಿರ್ಣಯದಂತೆ ಈ ಪಕ್ಷ ದ್ರೋಹಿ ಆಯನೂರು ಮಂಜುನಾಥ ವಿರುದ್ಧ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಂಪೂರ್ಣ ನಗರ ಸಮಿತಿಯು ಆಗ್ರಹಿಸುತ್ತೇವೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

(ಜಗದೀಶ್.ಎನ್.ಕೆ)

ಅಧ್ಯಕ್ಷರು,

ಬಿಜೆಪಿ ಶಿವಮೊಗ್ಗ ನಗರ.